ದಿನಾಂಕಃ 10-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ನಾನು ನನ್ನ ಪ್ರಮಾಣ ಪೂರ್ವಕ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆಸಿದ ವಿಷಯಗಳು ನಿಜ ಇರುತ್ತವೆ. ಅದಕ್ಕೆ ನಾನೇ ಸಹಿ ಮಾಡಿರುತ್ತೇನೆ.

ಸಾಕ್ಷಿಯ ಪ್ರಮಾಣ ಪೂರ್ವಕ ಹೇಳಿಕೆ

ಆರೋಪಿಯು ನೀಡಿದ ಚೆಕ್ ನ್ನು ಹಾಜರಪಡಿಸಿದ್ದು, ಅದನ್ನು ನಿಸಿ-1 ಎಂದು ಗುರುತಿಸಲಾಯಿತು. ಅದಕ್ಕೆ ಆರೋಪಿಯು ಸಹಿ ಮಾಡಿದ್ದಾರೆ. ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಸಿ-1 ಎ ಎಂದು ಗುರುತಿಸಲಾಯಿತು. ಬ್ಯಾಂಕಿನವರು ನೀಡಿದ ಮೆಮೊನ ದೃಢೀಕೃತ ನಕಲನ್ನು ಹಾಜರಪಡಿಸಿದ್ದು, ಅದನ್ನು ನಿಸಿ-2 ಎಂದು ಗುರುತಿಸಲಾಯಿತು. ಆರೋಪಿಗೆ ನಮ್ಮ ವಕೀಲರ ಮೂಲಕ ನೋಟೀಸ ನೀಡಿದ್ದು, ಅದರ ಕಛೇರಿ ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು ನಿಸಿ-3 ಎಂದು ಗುರುತಿಸಲಾಯಿತು. ಒಂದು ಅಂಚೆ ರಶೀದಿಯನ್ನು ಹಾಜರಪಡಿಸಿದ್ದು, ಅದನ್ನು ನಿಸಿ-4 ಎಂದು ಗುರುತಿಸಲಾಯಿತು. ಆರೋಪಿಗೆ ಕಳುಹಿಸಿಕೊಟ್ಟ ಲಿಗಲ್ ನೋಟೀಸು ನಿರಾಕರಿಸಿರುತ್ತಾರೆ ಎಂದು ಮರಳಿ ಬಂದಿದ್ದು, ಅದರ ಅಂಚೆ ಲಕೋಟೆಯನ್ನು ಹಾಜರಪಡಿಸಿದ್ದು, ಅದನ್ನು ನಿಸಿ-5 ಎಂದು ಗುರುತಿಸಲಾಯಿತು.

ಆದ್ದರಿಂದ ಆರೋಪಿ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲು ಕೋರುತ್ತೇನೆ

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.